MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 16-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ಮತ್ತೆ ಹೆಚ್ಚಳ

ಮಲೇಶಿಯಾ ಸರಕಾರ ಮಲೇಶಿಯಾದ ಪಾಮೆಣ್ಣೆ ರಫ್ತು ತೆರಿಗೆ ರೆಫರೆನ್ಸ್ ದರ ಇಳಿಕೆಯಾದ ನಂತರ ಪಾಮೆಣ್ಣೆ ಫ್ಯೂಚರ್ಸ್ ದರ(ನವೆಂಬರ್) 0.31 ಶೇಕಡಾ(1300 ರಿಟ್ಸ್) ಹೆಚ್ಚಳವಾಗಿದೆ.

## ಕರ್ನಾಟಕದಲ್ಲಿ ಖಾರೀಫ್ ಬೆಳೆ ಭತ್ತ ನಾಟಿ ಪ್ರದೇಶ ಇಳಿಕೆ

ಕರ್ನಾಟಕದಲ್ಲಿ ಭತ್ತ ನಾಟಿಯ ಒಟ್ಟು ಪ್ರದೇಶ ಈ ವರ್ಷದ ಖಾರೀಫ್ ಬೆಳೆಗೆ ಅರ್ಧಾಂಶಕ್ಕಿಂತಲೂ ಹೆಚ್ಚು ಕುಸಿತವಾಗಿದೆಯೆನ್ನಲಾಗಿದೆ. ಸಾಮಾನ್ಯ ನಾಟಿ ಪ್ರದೇಶದ ಶೇಕಡಾ 40 ಶೇಕಡಾ ಭಾಗ ಮಾತ್ರ ಪೂರ್ಣವಾಗಿದೆಯೆನ್ನಲಾಗಿದ್ದು, ಹೊಸ ಬೆಳೆಯ ಭತ್ತ ಉತ್ಪಾದನೆ ಗಣನೀಯ ಇಳಿಕೆ ಕಾಣುವ ಸಾಧ್ಯತೆಗಳಿವೆ. ಒಟ್ಟು ದೇಶದ ಭತ್ತ ನಾಟಿ ಪ್ರದೇಶ 15 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಹಾಗೂ ಭತ್ತ ಉತ್ಪಾದನೆ ಹಿಂದಿನ ವರ್ಷಕ್ಕೆ 10 ರಿಂದ 12 ಮಿಲಿಯನ್ ಟನ್ ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಈಗಾಗಲೇ ಅಕ್ಕಿ ದರಗಳು ಹೆಚ್ಚಳವಾಗಿದೆ.

## ರಾಜ್ಯಗಳಿಗೆ ತೊಗರಿಬೇಳೆ ದಾಸ್ತಾನು ಮೇಲೆ ನಿಗಾ ವಹಿಸುವಂತೆ ಕೇಂದ್ರದ ಸೂಚನೆ

ಅವಶ್ಯಕ ಸಾಮಾಗ್ರಿಗಳ ಕಾಯಿದೆಯನ್ವಯ ವಿವಿಧ ತೊಗರಿಬೇಳೆ ದಾಸ್ತಾನುಗಾರರ ದಾಸ್ತಾನು ಪ್ರಕಟಿಸುವಂತೆ ಹಾಗೂ ಅವುಗಳ ಮೇಲೆ ನಿಗಾ ವಹಿಸುವಂತೆ ಎಲ್ಲಾ ರಾಜ್ಯಗಳಿಗೂ ಕೇಂದ್ರ ಸರಕಾರ ಸೂಚಿಸಿದೆಯೆನ್ನಲಾಗಿದೆ. ಇತ್ತೀಚೆಗೆ ತೊಗರಿಬೇಳೆ ಹಾಗೂ ಉದ್ದಿನಬೇಳೆ ದರಗಳು ಗಣನೀಯ ಹೆಚ್ಚಳವಾಗುತ್ತಿವೆ. ತೊಗರಿಬೇಳೆಯ ನಿಯಂತ್ರಿತ ಮಾರಾಟದೊಂದಿಗೆ, ಕೆಲವರು ಹೆಚ್ಚಿನ ದಾಸ್ತಾನು ಹೊಂದಿ ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆಂಬ ಗುಮಾನಿಯಿದೆಯೆನ್ನಲಾಗಿದೆ. ದೇಶದ ಮಾರುಕಟ್ಟೆಯಲ್ಲಿ ಸಾಕಷ್ಟು ಬೇಳೆಕಾಳು ಲಭ್ಯವಿದೆಯೆಂದು ಸರಕಾರ ಪ್ರಕಟಿಸಿದೆ.